4/5
14/7/23

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 765 (874)
ಸದಸ್ಯರ ಹೆಸರು : ಶ್ರೀ ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ)
ಉತ್ತರಿಸುವ ದಿನಾಂಕ : 14-07-2023
ಉತ್ತರಿಸುವ ಸಚಿವರು : ಮಾನ್ಯ ಸಮಾಜ ಕಲ್ಯಾಣ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| 1. | ಮೀಸಲಾತಿಯ ಗೊಂದಲದಿಂದಾಗಿ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ ನೇಮಕಾತಿ ಪ್ರಕ್ರಿಯೆಗಳು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಪ್ರಸ್ತುತ ಯಾವ ರೋಸ್ಟರ್‌ಗಳನ್ನು ಮೀಸಲಾತಿ ಅಳವಡಿಸಲು ನಿರ್ಧರಿಸಲಾಗಿದೆ. (ವಿವರ ನೀಡುವುದು) | ಇಲ್ಲ. ದಿನಾಂಕ:23-10-2022ರ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 29 ಶಾಸನ 2022ರನ್ವಯ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧ್ಯಾದೇಶ 2022ನ್ನು ಹೊರಡಿಸಿ ಅನುಸೂಚಿತ ಜಾತಿಗಳಿಗೆ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಶೇಕಡ 15 ರಿಂದ ಶೇಕಡ 17ಕ್ಕೆ ಹಾಗೂ ಶೇಕಡ 3 ರಿಂದ ಶೇಕಡ 7ಕ್ಕೆ ಅನುಕ್ರಮವಾಗಿ ಹೆಚ್ಚಿಸಲಾದ ಹಿನ್ನೆಲೆಯಲ್ಲಿ ದಿನಾಂಕ:20-06-1995ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 8 ಸೆಹಿಮ 95ರಲ್ಲಿ ನೇರ ನೇಮಕಾತಿಯನ್ನು ಮಾಡಲು ನಿಗಧಿಪಡಿಸಿದ್ದ ರೋಸ್ಟರನ್ನು ಪರಿಷ್ಕರಿಸಿ ದಿನಾಂಕ:28-12-2022ರ ಸರ್ಕಾರಿ ಆದೇಶ ಸಂಖ್ಯೆ:ಸಿಆಸುಇ 01 ಸೆಹಿಮ 2022 ರಲ್ಲಿ ರೋಸ್ಟರನ್ನು ಗೊತ್ತುಪಡಿಸಲಾಗಿದೆ. ಇದರಂತೆ ಕ್ರಮವಹಿಸಲಾಗುತ್ತಿದೆ. |
| 2. | ಖಾಲಿಯಿರುವ ಹುದ್ದೆಗಳ ನೇಮಕಾತಿ ವಿಳಂಬದಿಂದಾಗಿ ಆಡಳಿತ ನಿರ್ವಹಣೆಗೆ ಉಂಟಾಗುವುದಿಲ್ಲವೇ; ಹಾಗಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ರೋಸ್ಟರ್‌ನ್ನು ನಿಗಧಿಪಡಿಸಲಾಗುವುದು; | |
| 3. | ಮೀಸಲಾತಿ ನಿಗಧಿಗಾಗಿ ಜಾತಿ ಜನಗಣತಿಯನ್ನು ಪರಿಗಣಿಸಲಾಗುತ್ತದೆಯೇ; ಹಾಗಿದ್ದಲ್ಲಿ, ಹಳೆ ಜಾತಿಗಣತಿ ವರದಿಯನ್ನು ಪರಿಗಣಿಸಲಾಗುತ್ತಿದೆಯೇ; ಅಥವಾ ಪರಿಷ್ಕೃತ ಜಾತಿ ಜನಗಣತಿಯನ್ನು ಪರಿಗಣಿಸಲಾಗುತ್ತದೆಯೇ? (ವಿವರ ನೀಡುವುದು). | ಹೌದು. 2011ರ ಜಾತಿಗಣತಿ ವರದಿಯನ್ನು ಪರಿಗಣಿಸಲಾಗುತ್ತಿದ್ದು, ಪರಿಶಿಷ್ಟ ಜಾತಿಯ ಜನಸಂಖ್ಯೆ 1,04,74,992 ಮತ್ತು ಪರಿಶಿಷ್ಟ ಪಂಗಡದ ಒಟ್ಟು ಜನಸಂಖ್ಯೆ:42,48,987 ಇರುತ್ತದೆ. 2011ರ ನಂತರ ಯಾವುದೇ ಸಾರ್ವತ್ರಿಕ ಜನಗಣತಿ ನಡೆದಿರುವುದಿಲ್ಲ. 2011ರ ಮಾಹಿತಿಯೇ ಈವರೆಗೂ ಅಧಿಕೃತವಾಗಿರುತ್ತದೆ. |

ಸಂಖ್ಯೆ: ಸಕಇ 120 ಪಕಸೇ 2023

(ಡಾ.ಹೆಚ್.ಸಿ.ಮಹಾದೇವಪ್ಪ)
ಸಮಾಜ ಕಲ್ಯಾಣ ಸಚಿವರು